# ವೇದಾಂತದಲ್ಲಿರುವುದೇನು?

ಎಸ್. ಜಗನ್ನಾಥ

ಎಲ್ಲ ಅನುಭವ ಮತ್ತು ಜ್ಞಾನಗಳ ತಳಹದಿಯಾದ 'ನಾನು' ಎಂಬುದರ ಹಿನ್ನೆಲೆಯಲ್ಲಿರುವ ಆತ್ಮತತ್ತ್ವವನ್ನು ಪ್ರತಿಪಾದಿಸುವುದೇ ವೇದಾಂತ. ಈ ವಿಚಾರವನ್ನು ವಿಶ್ಲೇಷಣಾತ್ಮಕವಾಗಿ ವಿವರಿಸಿರುವ ಶ್ರೀ ಎಸ್.ಜಗನ್ನಾಥರು ಮೈಸೂರಿನ ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿ ಸಂಶೋಧಕರಾಗಿ ಕಾರ್ಯನಿರತರಾಗಿರುವರು.

ಮನುಷ್ಯಜಾತಿಯಲ್ಲಿ ಜನಿಸಿದ ಜೀವಿಗಳಿಗೆ 'ನಾನು ಯಾರು? ನನ್ನ ಸುತ್ತ ಮುತ್ತ ಕಾಣುತ್ತಿರುವ ಪ್ರಪಂಚವಂತೂ ನನ್ನ ಹೊರಗಿದೆಯೆಂದೇ ಅನ್ನಿಸುತ್ತಿದೆ. ಇದರ ನಿಜವಾದ ಮರ್ಮವೇನು? ನನಗೂ ಈ ಹೊರಪ್ರಪಂಚಕ್ಕೂ ಇರುವ ಸಂಬಂಧ ಯಾವ ರೀತಿಯದ್ದು?' ಎಂಬ ಸಂಶಯ ಜೀವಿತಕಾಲದಲ್ಲಿ ಯಾವಾಗಲಾದರೂ ಬಂದೇ ಬರುತ್ತದೆ. ಒಮ್ಮೆಯಾದರೂ ಇಂಥ ಸಂಶಯವೇ ಹುಟ್ಟದಿರುವ ಜೀವಿಯು ಅಪಸಾಮಾನ್ಯನೋ ಅತಿಸಾಮಾನ್ಯನೋ ಆಗಿರಬೇಕಾಗುತ್ತದೆ. ಸರಿಯಾಗಿ ನೋಡುವುದಾದಲ್ಲಿ ಇಂಥ ಪ್ರಶ್ನೆಗಳು ತಲೆಯಲ್ಲಿ ಬರಲು ತುಂಬಾ ಓದಿರಬೇಕೆಂದೇನೂ ಇಲ್ಲ. ವೇದಾಂತದ ಗಂಧಗಾಳಿಯೂ ಇರಬೇಕಾಗಿಲ್ಲ. ಈ ರೀತಿಯ ಪ್ರಶ್ನೆಗಳು ದೇಶಾಧ್ಯಕ್ಷನಿಂದ ಹಿಡಿದು ಬಡ ಭಿಕ್ಷುಕನವರೆಗೆ ಎಲ್ಲರ ತಲೆ ತಿನ್ನಬಹುದು. ತಾತ್ಪರ್ಯವಿಷ್ಟೆ: ಈ ರೀತಿಯ ಪ್ರಶ್ನೆಗಳು, ಎಲ್ಲಾ ಕಾಲದ ಎಲ್ಲಾ ಜನಾಂಗದ ಮೂಲಭೂತ ಕುತೂಹಲದಿಂದ ಹುಟ್ಟುತ್ತವೆ.

ಹೀಗೆಂದ ಮಾತ್ರಕ್ಕೆ ರಹಸ್ಯವಾದ ಅಥವಾ ಇಂದ್ರಿಯಾತೀತವಾದ ನಿಗೂಢವಾದ ಅನುಭವಗಳನ್ನು ಈ ಕೌತುಕದ ಪರಿಧಿಯಲ್ಲಿ ತರಲು ಸಾಧ್ಯವೆಂದು ಹೇಳಲಾಗುವುದಿಲ್ಲ. ಏಕೆಂದರೆ ಇಂಥ ಅನುಭವಗಳು ಕೇವಲ ವೈಯಕ್ತಿಕ ಅನುಭವಗಳಾಗಿಬಿಡುವ ಸಂಭವವಿದ್ದೇ ಇದೆ. ಜೊತೆಗೆ ಅವುಗಳಿಗೆಲ್ಲ ಕಾಲದ ದೇಶದ ಎಲ್ಲೆಕಟ್ಟೂ ಇದ್ದುಕೊಂಡುಬಿಡುತ್ತದೆ. ಇದನ್ನು ಸ್ವಲ್ಪ ವಿಶ್ಲೇಷಿಸಿ ನೋಡೋಣ. ಪಾತಂಜಲಯೋಗಮಾರ್ಗವನ್ನು ಅನುಸರಿಸಿ ಸಾಧನೆಗೈಯುವ ಓರ್ವ ವ್ಯಕ್ತಿ, ಸಾಧನೆಯ ಸಮಯದಲ್ಲಿ ತನ್ನ ಸುತ್ತಲೂ ಮಳೆ ಸುರಿಯುತ್ತಿರುವಂತೆಯೋ ಅಥವಾ ತನ್ನ ಶರೀರದಿಂದ ಜ್ವಾಲೆಗಳು ಹೊರಹೊಮ್ಮುತ್ತಿರುವಂತೆಯೋ ಅನುಭವವಾಗುತ್ತದೆಯೆಂದು ಹೇಳಿಕೊಳ್ಳಬಹುದು. ಇದು ನಿಜವೆಂದೇ ಸದ್ಯಕ್ಕೆ ನಂಬೋಣ. ಇಲ್ಲಿ ನೆನಪಿಡಬೇಕಾದ ಸಂಗತಿಯೆಂದರೆ, ಆ ವ್ಯಕ್ತಿ ಹೇಳುತ್ತಿರುವುದು ನಿಜವೆಂದು ನಾವು ನಂಬಲೂಬಹುದು ಅಥವಾ ಸುಳ್ಳೆಂದು ತಳ್ಳಿಹಾಕಲೂ ಬಹುದು. ನಿಜವೆಂದು ನಂಬಿದರೆ ಅದರ ಅರ್ಥ, ನಮಗೂ ಅಂಥ ಅನುಭವವಾಗಲೆಂಬ ಆಸೆ ನಂಬಿಕೆಯ ರೂಪದಲ್ಲಿ ಹೊರಹೊಮ್ಮಿರುತ್ತದೆ. ಅಥವಾ ಆ ವ್ಯಕ್ತಿ ಸುಳ್ಳು ಹೇಳಿರಲಾರ ಎಂದು ವ್ಯಕ್ತಿಯ ಮೇಲಿನ ನಂಬಿಕೆಯು ಆತನ ಮಾತಿನ ಮೇಲಿನ ಸಮರ್ಥನೆಯ ರೂಪದಲ್ಲಿ ವ್ಯಕ್ತವಾಗಿರುತ್ತದೆ. ಇದರ ಮಥಿತಾರ್ಥವಿಷ್ಟೆ : ಆ ವ್ಯಕ್ತಿ ಹೇಳಿಕೊಂಡ ತನ್ನ ಅನುಭವಗಳನ್ನು ಕೇಳಿದಾಕ್ಷಣ, ಕೇಳಿದ ನಮಗೂ ಅಂಥದ್ದೇ ಅನುಭವ ಆಗಿಯೇಬಿಡುವುದಿಲ್ಲ. ನಿರ್ದಿಷ್ಟವಾದ ಸ್ಥಳ ಹಾಗೂ ನಿರ್ದಿಷ್ಟವಾದ ಕಾಲದಲ್ಲಿ ನಿರ್ದಿಷ್ಟವಾದ ವ್ಯಕ್ತಿಗೆ ಆಗುವ ಅನುಭವಗಳಿವು. ಇಂಥವು ಸಾರ್ವತ್ರಿಕ ಅನುಭವಗಳಲ್ಲ.

ಸಾರ್ವತ್ರಿಕ ಅನುಭವವೆಂದರೆ ಹೀಗೆ : ನೋಡುವಿಕೆ, ಕೇಳುವಿಕೆ, ಮುಟ್ಟುವಿಕೆ, ಇವೂ ಕೂಡ ಅನುಭವಗಳೇ. ಸ್ವಲ್ಪ ಮಟ್ಟಿಗೆ ಇವು ಎಲ್ಲರಿಗೂ ಸಮಾನವಾದ ಅನುಭವಗಳಾದ್ದರಿಂದ, ಒಂದರ್ಥದಲ್ಲಿ ಇವೆಲ್ಲ ಸಾರ್ವತ್ರಿಕ ಅನುಭವಗಳೇ ಆಗಿರುತ್ತವೆ. ಕಿವಿಯಿಂದ ನೋಡುವುದೇ ಆಗಲೀ ಕಣ್ಣಿನಿಂದ ಕೇಳುವುದೇ ಆಗಲೀ ಯಾರಿಗೂ ಸಾಧ್ಯವಿಲ್ಲ. ಅಥವಾ ಯಾರಾದರೂ ಯೋಗಿಯೋರ್ವನು ಈ ತರಹದ ಸಿದ್ಧಿಗಳನ್ನೇನಾದರೂ ಪಡೆದಿದ್ದಲ್ಲಿ ಮತ್ತೊಮ್ಮೆ ಅದು ವೈಯಕ್ತಿಕ ಅನುಭವವೇ ಆಗಿಹೋಯಿತು. ಅದು ಹಾಗಿರಲಿ, ಈ ಕೇಳುವಿಕೆ ಮುಂತಾದ ಅನುಭವಗಳು ಯಾವ ಮಹಾ ಅನುಭವದ ಮೇಲೆ ಕೆಲಸ ಮಾಡುತ್ತವೆ? ಅರ್ಥಾತ್, ಯಾವ ಅನುಭವವಿಲ್ಲದೆ ಈ ತಾತ್ಕಾಲಿಕವಾದ ಅನುಭವಗಳು ಹುಟ್ಟುವುದೇ ಇಲ್ಲವೋ ಅಂಥ ಮಹಾನ್ ಅನುಭವ ಯಾವುದು ಎಂಬ ಪ್ರಶ್ನೆ ನಿಜವಾಗಿ ಸಮಸ್ತ ಪ್ರಜ್ಞಾವಂತ ಸ್ತ್ರೀಪುರುಷರೂ ತಮಗೆ ತಾವೇ ಕೇಳಿಕೊಳ್ಳಬೇಕಾದ—ಸರಿಯಾಗಿ ಹೇಳುವುದಾದಲ್ಲಿ—ಆಗಾಗ್ಗೆ ಕೇಳಿಕೊಳ್ಳುತ್ತಿರುವ ಪ್ರಶ್ನೆ. ಇಂಥ ಪ್ರಶ್ನೆಗಳಿಗೆ ತಮ್ಮ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಅವರವರೇ ಉತ್ತರಗಳನ್ನು ಕಂಡುಕೊಂಡಿರಲೂಬಹುದು. ಇಂಥ ಉತ್ತರಗಳನ್ನು ಒಟ್ಟುಗೂಡಿಸಿ ದಾಖಲಾತಿ ಮಾಡಿದರೆ ಆ ದಾಖಲಾತಿಯು ಬೇರೆಯವರ ಉಪಯೋಗಕ್ಕೂ ಬರುತ್ತದೆ. ಅಂಥ ದಾಖಲಾತಿಯನ್ನು ನಾವು ಕಾಣುವುದು ವೇದಾಂತದ ಮೂಲಕ.

ವೇದವೆಂದರೆ ವೇದನೆಯೆಂದೇ ಸದ್ಯಕ್ಕಿಟ್ಟುಕೊಂಡರೂ ಬಾಧಕವಿಲ್ಲ. ವೇದನೆಯೆಂದರೆ ದುಃಖವೆಂಬ ಅರ್ಥ ಕನ್ನಡದಲ್ಲೇನೋ ರೂಢಿಯಲ್ಲಿದೆ. ಆದರೆ, ವೇದ ಹಾಗೂ ವೇದನೆ ಎರಡೂ ಮೂಲತಃ 'ವಿದ್'ಎಂಬ ಒಂದೇ ಧಾತುವಿನಿಂದ ಬಂದಿವೆ. ಅನುಭವವೆಂಬ ವಿಶಾಲಾರ್ಥದಲ್ಲಿ ಇದನ್ನು ತೆಗೆದುಕೊಳ್ಳಲು ಸಾಧ್ಯವಿದೆ. 'ವೇದನಂ ಸುಖದುಃಖಯೋಃ' ಎಂದು ಅಮರಕೋಶದಲ್ಲಿಯೇ ಹೇಳಿದೆ. ಸುಖದುಃಖರೂಪವಾದ ಎಲ್ಲಾ ಅನುಭವವೂ ವೇದನೆಯೇ.

ಔದಾಸೀನ್ಯವೆನ್ನುವುದೂ ಒಂದು ಅನುಭವವಾಗಬಹುದೇನೋ. ಆದರೆ ಅದು ವಿಚಾರದ ಅಳತೆಪಟ್ಟಿಗೆ ಸಿಕ್ಕುವುದಿಲ್ಲವಾಗಿ ಅದನ್ನೀಗ ಪಕ್ಕಕ್ಕೆ ತಳ್ಳಬಹುದು. ಸುಖ ಹಾಗೂ ದುಃಖ ಎರಡನ್ನೇ ಲೆಕ್ಕಕ್ಕಿಟ್ಟರೆ, ನಮ್ಮೆಲ್ಲ ಸುಖ ರೂಪವಾದ ಅನುಭವಗಳ ಹಾಗೂ ದುಃಖ ರೂಪವಾದ ಅನುಭವಗಳ ಅಂತಿಮ ಹಂತ ಎಲ್ಲಿದೆ? ಪ್ರಾರಂಭ ಯಾವುದರಿಂದ? ಅಥವಾ ಎಲ್ಲಿಂದ? ಇತ್ಯಾದಿ ವಿಷಯಗಳಲ್ಲಿ ನಾವು ತಳೆಯಬೇಕಾದ ಕೊಟ್ಟಕೊನೆಯ ತೀರ್ಪೇ ಅಂತ. ಇದೇ 'ವೇದಾಂತ'

**ನಮ್ಮೆಲ್ಲ ಸುಖರೂಪವಾದ ಅನುಭವಗಳ ಹಾಗೂ ದುಃಖ ರೂಪವಾದ ಅನುಭವಗಳ ಅಂತಿಮ ಹಂತವೇ ವೇದಾಂತ**

ಇಷ್ಟೊಂದು ದ್ರಾವಿಡಪ್ರಾಣಾಯಮಕ್ಕೆ ಬದಲು ವೇದವೆಂದರೆ ಜ್ಞಾನವೆಂಬ ಪ್ರಸಿದ್ಧವಾದ ಅರ್ಥವನ್ನೇ ಗ್ರಹಿಸೋಣ. ನಮ್ಮ ಎಲ್ಲಾ ಲೌಕಿಕಜ್ಞಾನ—ಲೌಕಿಕ ಅನುಭವಗಳಿಗೂ ಆಧಾರವಾದ—ಶಾಸ್ತ್ರೀಯವಾಗಿ ಹೇಳುವುದಾದಲ್ಲಿ— 'ಆಸ್ಪದ'ವಾದ ಪರಮಾರ್ಥ ಯಾವುದೆಂಬುದರ ಬಗೆಗೆ ಇರುವ ಚಿಂತನಾಸರಣಿಗಳ 'ಅಂತ' ಅಥವಾ ಕೊನೆಯ ತೀರ್ಪು ಯಾವುದೋ ಅದೇ ವೇದಾಂತ.

ವೇದಾಂತವೆಂದರೆ ಮನಶ್ಶಾಸ್ತ್ರವೇ? ಈ ಪ್ರಶ್ನೆಗೆ ಹೌದು ಎಂದು ಉತ್ತರ ನೀಡುವವರಿದ್ದಾರೆ. ಮನಶ್ಶಾಸ್ತ್ರದ ಯಾವುದಾದರೂ ಪ್ರಕ್ರಿಯೆಗಳು ವೇದಾಂತದಲ್ಲಿಯೂ ಕಾಣಸಬಹುದು. ಆದರೆ, ವೇದಾಂತವು ಮನಸ್ಸಿಗೂ ಆಧಾರವಾದ ಆತ್ಮನನ್ನು ಕುರಿತಾದ ಶಾಸ್ತ್ರ. ಸರಿಯಾಗಿ ಹೇಳುವುದಾದಲ್ಲಿ, ಅಧ್ಯಾತ್ಮಶಾಸ್ತ್ರ. ಮನಸ್ಸು ಎಂಬುದು ವಿಷಯ. ವೇದಾಂತವು ಮನಸ್ಸನ್ನು ಗಮನಿಸುವ ವ್ಯಕ್ತಿಯ ಸ್ವರೂಪವನ್ನೇ ಕುರಿತು ವಿಚಾರ ಮಾಡುತ್ತದೆ. ಮನಸ್ಸಿನ ಬಗೆಗೆ ಕೆಲವು ಸೂಚನೆಗಳು ವೇದಾಂತದಲ್ಲಿ ಬರಬಹುದು. ಆದರೆ ಅವು ಚಿಂತನೆ ಮಾಡುವ ವ್ಯಕ್ತಿಯ ಸ್ವಂತ ಮನಸ್ಸಿನ ಬಗೆಗೇ ವಿಚಾರಲಹರಿಯನ್ನು ತೇಲಿಬಿಡುತ್ತವೆ. ಮನಶ್ಶಾಸ್ತ್ರ ಪ್ರಯೋಗ ಮಾಡುವುದು, ಬೇರೊಬ್ಬ ವ್ಯಕ್ತಿಯ ಮನಸ್ಸಿನ ಬಗೆಗೆ. ವೇದಾಂತ ವಿಚಾರಿಸುವುದು, ವಿಚಾರ ಮಾಡುವ ವ್ಯಕ್ತಿಯ ಸ್ವಂತ ಮನಸ್ಸಿನ ಬಗೆಗೆ.

ವೇದವೆಂಬ ಶಬ್ದಕ್ಕೆ ಋಗ್ವೇದಾದಿ ನಾಲ್ಕು ವೇದಗಳೆಂಬ ಅರ್ಥ ಸರಿಯಾಗೇನೋ ಇದೆ. ಆದರೆ ವೇದಾಂತವೆಂಬ ಶಬ್ದದಲ್ಲಿ ಬರುವ ವೇದಶಬ್ದವು ಸೂಚಿಸುವ ಅರ್ಥ ಇದಾಗಿರಲಾರದು. ಉಪನಿಷತ್ತುಗಳನ್ನು ವೇದಾಂತವೆಂಬ ಹೆಸರಿನಿಂದ ಕರೆಯುವ ರೂಢಿಯಿದೆಯಷ್ಟೆ. ವೇದಾಂತ ಶಬ್ದದಲ್ಲಿನ ವೇದವೆಂಬುದು ಋಗ್ವೇದಾದಿ ವೇದಗಳನ್ನು ತಿಳಿಸುತ್ತದೆಯೆಂದಿಟ್ಟುಕೊಂಡಲ್ಲಿ, ಶುಕ್ಲಯಜುರ್ವೇದದ ಕೊನೆಯ ಭಾಗವಾದ ಈಶಾವಾಸ್ಯೋಪನಿಷತ್ತೊಂದನ್ನು ಬಿಟ್ಟು, ಮತ್ತಾವ ಉಪನಿಷತ್ತಿಗೂ ವೇದಾಂತವೆಂಬ ಹೆಸರು ಸಲ್ಲದೆಯೇ ಹೋಗಬೇಕಾಗುತ್ತದೆ. ಮತ್ತಾವ ವೇದದ ಕೊನೆಯ ಭಾಗದಲ್ಲಿಯೂ ಯಾವ ಉಪನಿಷತ್ತೂ ಇಲ್ಲ. 'ಮಂತ್ರಬ್ರಾಹ್ಮಣಯೋರ್ವೇದನಾಮಧೇಯಂ' ಎಂಬ ಕಾತ್ಯಾಯನವಚನವು ಅತ್ಯಂತ ವಿವಾದಾಸ್ಪದವಾಗಿದೆ. ವೇದಗಳು ನಾಲ್ಕು ಎಂಬ ಮಾತು ಸರಿಯಾದದ್ದು. ಬ್ರಾಹ್ಮಣಗಳ ಅಥವಾ ಆರಣ್ಯಕಗಳ ಭಾಗಗಳಾದ ಅಥವಾ ಸ್ವತಂತ್ರವಾಗಿರುವ ಉಪನಿಷತ್ತುಗಳನ್ನೆಲ್ಲ ವೇದಶಬ್ದದ ಅರ್ಥವ್ಯಾಪ್ತಿಯಲ್ಲಿ ಸೇರಿಸಿಕೊಂಡಲ್ಲಿ ಆ ಸಂಖ್ಯೆ ಹತ್ತಕ್ಕಿಂತ ಹೆಚ್ಚಾಗಬೇಕಾದೀತು. ಅದನ್ನು ಯಾರೂ ಒಪ್ಪುವುದಿಲ್ಲ.

ಒಟ್ಟಿನಲ್ಲಿ, ವೇದಾಂತವು ಎಲ್ಲಾ ಲೌಕಿಕ ಹಾಗೂ ಅಲೌಕಿಕ ಜ್ಞಾನಗಳ ಅನುಭವದ ಬಗೆಗಿನ ಕೊನೆಯ ತೀರ್ಮಾನವಾಗಿದೆ.

ಜೀವನವೆಂದರೆ, ದ್ರಷ್ಟೃ (ನೋಡುವ ವ್ಯಕ್ತಿ), ದರ್ಶನ (ನೋಡುವಿಕೆ) ಹಾಗೂ ದೃಶ್ಯ (ನೋಡಲ್ಪಡುವ ವಸ್ತುಸಾಮಗ್ರಿ) ಈ ಮೂರರ ಸಂಸರ್ಗವೈವಿಧ್ಯವಷ್ಟೆ. ಶಾಸ್ತ್ರಗಳೆಂದರೆ ದೃಶ್ಯದ ಬಗೆಗೆ ಚಿಂತನಮಂಥನಗಳನ್ನು ಮಾಡುವ ವ್ಯಕ್ತಿಗಳ ವಿಚಾರಧಾರೆಗಳ ಅಚ್ಚುಕಟ್ಟಾದ ಸಾಮಗ್ರಿಸಂಕಲನಗಳು. ವೇದಾಂತವು ಈ ರೀತಿಯದ್ದಲ್ಲ. ಅದು, ದ್ರಷ್ಟೃವಿನ ಬಗೆಗೇ ತಿಳಿಸುವ ವಿಶಿಷ್ಟಶಾಸ್ತ್ರ.

ದ್ರಷ್ಟೃವೆಂದರೆ ದೃಶ್ಯವನ್ನು ದರ್ಶನರೂಪವಾದ ಅನುಭವದಿಂದ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಿರುವ ನಾವುಗಳೇ ತಾನೆ? ನಾವುಗಳು ನಮ್ಮ ಬಗ್ಗೆಯೆ ತಿಳಿದುಕೊಳ್ಳಬೇಕಾದದ್ದೇನು? ಈ ಪ್ರಶ್ನೆಯೇನೋ ತೂಕವಾದದ್ದು. ಇದಕ್ಕೆ ಉತ್ತರವೂ ಇದ್ದೇ ಇದೆ. 'ನಾನು' ಎಂಬ ಶಬ್ದಕ್ಕೆ 'ನಾನು' ಎಂಬುದೇ ಸರಿಯಾದ ಅರ್ಥ. ಅದು ನಮಗೆಲ್ಲ ಗೊತ್ತಿದ್ದೂ ಆಗಿದೆ.

ಆದರೆ 'ನಾನು' ಎಂದು ಲೋಕದಲ್ಲಿ ವ್ಯವಹರಿಸುವಾಗ 'ನಾನು'ಅಲ್ಲದ್ದನ್ನು ಬೆರಕೆ ಮಾಡಿಕೊಂಡು ನಾವು ಜಗತ್ತಿನ ಜೊತೆಗೆ ನಮ್ಮ ಸಂಬಂಧಗಳನ್ನು ಕಲ್ಪಿಸಿಕೊಳ್ಳುತ್ತೇವೆ. 'ನೀನು' ಎಂಬುದರ ಅಪೇಕ್ಷೆಯಿದ್ದರೇ 'ನಾನು' ಎಂಬುದಕ್ಕೆ ಬೆಲೆ.

ಅಲ್ಲದೇ,ನಾವು ತೀವ್ರವಾಗಿ ಯಾವುದಾದರೂ ಕೆಲಸದಲ್ಲಿ ತಲ್ಲೀನರಾಗಿದ್ದಾಗ 'ನಾನು'ಎಂಬುದನ್ನು ಮರೆತೇಬಿಟ್ಟಿರುತ್ತೇವಷ್ಟೆ. ಹಾಗೆ ಮರೆತಾಗ ನಿಜವಾಗಿ ಇದ್ದದ್ದು ಏನು ಎಂಬ ಪ್ರಶ್ನೆ ಬರುತ್ತದೆ. ವಾಸ್ತವಿಕವಾಗಿ, ಅಲ್ಲಿದ್ದದ್ದು ಕೇವಲ 'ಅರಿವು' ಮಾತ್ರ.

ವೇದಾಂತವು 'ನಾನು' 'ನೀನು'ಗಳ ಭೇದವನ್ನು ಶುದ್ಧಸ್ವರೂಪದಲ್ಲಿ ತೋರಿಸಿಕೊಟ್ಟು, ಬೆರಕೆಯ 'ನಾನು' ಅಹಂಕಾರವೆಂದೂ 'ನಾನು'ಎಂಬ ಪ್ರತೀತಿಗೆ ಕಾರಣವಾದ 'ಶುದ್ಧಜ್ಞಾನ'ವನ್ನು ಆತ್ಮನೆಂದೂ ತಿಳಿಸಿಕೊಡುತ್ತದೆ.

ತುಂಬಾ ಸೂಕ್ಷ್ಮವಾಗಿ ನೋಡಹೋದಲ್ಲಿ 'ನಾನು' ಎಂಬುದು ಶುದ್ಧವಾದ ರೀತಿಯಲ್ಲಿ ಅನುಭವಕ್ಕೆ ಬರುವುದಿಲ್ಲ. ಯಾವಾಗಲೂ 'ನಾನು ಶರೀರ', 'ನಾನು ಮನಸ್ಸು,' 'ನಾನು ಇಂದ್ರಿಯಗಳು', 'ನಾನು ನಿಂತಿದ್ದೇನೆ', 'ನಾನು ಕುಳಿತಿದ್ದೇನೆ', 'ನಾನು ಊಟ ಮಾಡುತ್ತಿದ್ದೇನೆ' ಮುಂತಾದ ರೀತಿಯಲ್ಲಿ ಬೆರಕೆಯಾಗಿಯೇ ಅನುಭವಕ್ಕೆ ಬರುತ್ತದೆಯೇ ಹೊರತು, ಇದಾವುದೂ ಇಲ್ಲದ 'ಶುದ್ಧ ನಾನು' ಎಂಬುದು ಅಸ್ತಿತ್ವದಲ್ಲಿಯೇ ಇಲ್ಲ. ಇದಾವುದೂ ಇಲ್ಲದಾಗ

ಮಾತ್ರ ನಮ್ಮ ಸತ್ಯಸ್ವರೂಪದಲ್ಲಿ ನಾವಿರುತ್ತೇವೆ.

ನಮ್ಮ ವಾಸ್ತವಿಕವಾದ ಸ್ವರೂಪದ ಅನುಭವ ನಮಗೆ ಬರುವುದು ಸುಷುಪ್ತಿ (ಕನಸಿಲ್ಲದ ಗಾಢನಿದ್ರೆ)ಯಲ್ಲಿ. ನಮಗೆ ಎಚ್ಚರ, ಕನಸು ಹಾಗೂ ಕನಸಿಲ್ಲದ ಗಾಢನಿದ್ರೆ ಹೀಗೆ ಮೂರು ಅವಸ್ಥೆಗಳು ಬಂದುಹೋಗುತ್ತವೆಯೆಂದು ನಾವು ಹೇಳಿಕೊಳ್ಳುತ್ತೇವೆಯಷ್ಟೆ. ನಿಜವಾಗಿ ನೋಡಹೋದರೆ ಈ ಅವಸ್ಥೆಯೆಂಬ ಮಾತೇ ಸರಿಯಿಲ್ಲ. ಏಕೆಂದರೆ ಕಾಲಕ್ಕೆ ಸಂಬಂಧಿಸಿದ ವಿಶೇಷಕ್ಕೆ 'ಅವಸ್ಥೆ'ಎಂದು ಹೆಸರು—ಹೀಗೆ ಅಮರಕೋಶದಲ್ಲಿ ಹೇಳಿದೆ. ಆದರೆ, ವೇದಾಂತದ ಪ್ರಕಾರ ಕಾಲವೂ ಬ್ರಹ್ಮನದ್ದೇ ಒಂದು ರೂಪ.

ಮತ್ತೊಂದು ಮಾತೆಂದರೆ, ಜಾಗ್ರತ್ತು, ಸ್ವಪ್ನ ಹಾಗೂ ಸುಷುಪ್ತಿ ಹೀಗೆ ಮೂರು ಅವಸ್ಥೆಗಳು ಒಂದಾದಮೇಲೆ ಒಂದು ಬಂದು ಹೋಗಿ ಮಾಡುತ್ತವೆಯೆಂದು ನಾವು ಹೇಳಿಕೊಳ್ಳುತ್ತೇವೆ ತಾನೆ? ಆದರೆ ಸ್ವಪ್ನದ ಅನಂತರ ನೇರವಾಗಿ ಜಾಗ್ರತ್ತೇ ಅನುಭವಕ್ಕೆ ಬರಬಹುದು. ಹಾಗಾದಾಗ ಮಾತ್ರವೇ 'ಇಂಥ ಕನಸು ನನಗೆ ಬಿತ್ತು' ಎಂದು ನಾವು ಅಂದುಕೊಳ್ಳುವುದು ಸಾಧ್ಯವಾಗುತ್ತದೆ. ಸುಷುಪ್ತಿಯ ಅನಂತರ ಜಾಗ್ರತ್ತೇ ಬರಬೇಕೆಂದೇನೂ ಇಲ್ಲ. ಸ್ವಪ್ನವೂ ಬರಬಹುದು. ಕೆಲವೊಮ್ಮೆ ಅತಿ ಆಯಾಸದಿಂದಲೋ ಅಥವಾ ಮತ್ತಾವುದಕ್ಕೋ ನಿದ್ರೆ ಮಾಡುವಾಗ ಕನಸಾವುದೂ ಬೀಳದೆಯೂ ಹೋಗಬಹುದು.

ದ್ರಷ್ಟೃ, ದರ್ಶನ ಹಾಗೂ ದೃಶ್ಯ ಇವು ಮೂರು ಜಾಗ್ರತ್ತಿನಲ್ಲಿಯೂ ಇರುತ್ತವೆ, ಕನಸಿನಲ್ಲಿಯೂ ಇರುತ್ತವೆ. ಸುಷುಪ್ತಿಯಲ್ಲಿ ಇವು ಒಂದೂ ಇರುವುದಿಲ್ಲ. ಆದ್ದರಿಂದಲೇ ಎಚ್ಚೆತ್ತಾಗ 'ನನಗೇನೂ ಗೊತ್ತಾಗಲಿಲ್ಲ' ಎಂದು ನಾವು ಅಂದುಕೊಳ್ಳುವುದು. ನಿಜವಾದ ಸಂಗತಿಯೇನೆಂದರೆ, ಸುಷುಪ್ತಿಯಲ್ಲಿ ನಮಗೆ ಗೊತ್ತಾಗಬೇಕಾದದ್ದು ಏನೂ ಇರುವುದಿಲ್ಲ. ಅಲ್ಲಿ ನಮ್ಮ ಸ್ವರೂಪದಿಂದಲೇ ನಾವಿದ್ದುಬಿಟ್ಟಿರುತ್ತೇವೆ.

ಮದ, ಮೂರ್ಛೆ ಮುಂತಾದುವೂ ಸಹ ಒಂದರ್ಥದಲ್ಲೇನೋ ಅವಸ್ಥೆಗಳೇ. ಆದರೆ, ಅವಸ್ಥೆಯೆಂದು ಯಾವುದಕ್ಕೆ ಹೆಸರಿಟ್ಟರೂ ದ್ರಷ್ಟೃ, ದರ್ಶನ, ದೃಶ್ಯವೆಂಬ ತ್ರಿಪುಟಿಯ ಭೇದ ಗೋಚರಿಸುವಂಥದ್ದು ಹಾಗೂ ಗೋಚರವಾಗದಂಥದ್ದು ಎಂಬ ಎರಡು ವಿಶೇಷಗಳಿರುತ್ತವೆಯೆಂದು ತಿಳಿದರೆ ಸಾಕಾಗುತ್ತದೆ.

ಅರ್ಥಾತ್,ಕೆಲವರು ತುರೀಯಾವಸ್ಥೆ,ಅತಿತುರೀಯಾವಸ್ಥೆ ಎಂದು ಕಲ್ಪಿಸಿರುವ ಅವಸ್ಥೆಗಳೆಲ್ಲ ಬೇಕೇ ಇಲ್ಲ. ತುರೀಯವೆಂದರೆ ೧,೨,೩ ಎಂಬ ಸಂಖ್ಯೆಯ ಅನಂತರ ೪ ಎಂಬ ಸಂಖ್ಯೆ ಬರುವಂತೆ ಬರುವ ವಸ್ತುವಿಶೇಷವಲ್ಲ. ತುರೀಯವೆಂದರೆ ವಾಸ್ತವಿಕವಾಗಿ, ಮೂರು ಅವಸ್ಥೆಗಳ ಪೈಕಿ, ಒಂದರ ಹಂಗೂ ಇಲ್ಲದ ಆತ್ಮನಷ್ಟೆ.

ಜೀವನದಲ್ಲಿ ನಮಗೆಲ್ಲರಿಗೂ ಅನುಭವಕ್ಕೆ ಬರುತ್ತಿರುವ ಜಾಗ್ರತ್, ಸ್ವಪ್ನ ಹಾಗೂ ಸುಷುಪ್ತಿ ಈ ಮೂರೂ ಯಾವುದರಲ್ಲಿ ಆಸ್ಪದವನ್ನು ಪಡೆದಿವೆಯೋ ಅದೇ ನಿಜವಾದ 'ಪರಮಾರ್ಥವಸ್ತು'ವೆಂದು ವೇದಾಂತ ಹೇಳುತ್ತದೆ.

ಜಾಗ್ರತ್ತು ಮುಂತಾದುವುಗಳಿಗೆ ಇರುವ ಅಸ್ತಿತ್ವ ಕೇವಲ ವ್ಯಾವಹಾರಿಕ ಮಾತ್ರ. ಇದನ್ನು ಸರಿಯಾಗಿ ತಿಳಿದುಕೊಂಡರೆ, ಕಳ್ಳನನ್ನು ಕಳ್ಳ ಎಂದು ಸರಿಯಾಗಿ ತಿಳಿದುಕೊಂಡವರು ಕಳ್ಳನಿಂದ ಹೇಗೆ ಮೋಸಹೋಗುವುದಿಲ್ಲವೋ ಹಾಗೆಯೇ ಜಾಗ್ರದಾದಿಗಳು ಪಾರಮಾರ್ಥಿಕಗಳೇನಲ್ಲ ಎಂಬುದನ್ನು ಗೊತ್ತುಪಡಿಸಿಕೊಂಡವರು ಅವುಗಳಿಂದ ಉಂಟಾಗಬಹುದಾದ ಶೋಕಮೋಹಗಳಿಗೆ ಈಡಾಗುವುದಿಲ್ಲ. ಇದೇ ವೇದಾಂತದ ಒಳತಿರುಳು. ❖

## ಶಬ್ದ-ನಿಶ್ಶಬ್ದ

ಶಬ್ದವೆಂಬೆನೆ? ಶ್ರೋತ್ರದೆಂಜಲು
ಸ್ಪರ್ಶವೆಂಬೆನೆ? ತ್ವಕ್ಕಿನೆಂಜಲು
ರೂಪವೆಂಬೆನೆ? ನೇತ್ರದೆಂಜಲು
ರುಚಿಯೆಂಬೆನೆ? ಜಿಹ್ವೆಯೆಂಜಲು
ಪರಿಮಳವೆಂಬೆನೆ? ಘ್ರಾಣದೆಂಜಲು
ನಾನೆಂಬೆನೆ? ಅರಿವಿನೆಂಜಲು
ಎಂಜಲೆಂಬ ಭಿನ್ನವಳಿದ ಬೆಳಗಿನೊಳಗಣ
ಬೆಳಗು ಗುಹೇಶ್ವರ ಲಿಂಗವು.

ಶಿಲೆಯೊಳಗಣ ಪಾವಕನಂತೆ,
ಉದಕದೊಳಗಣ ಪ್ರತಿಬಿಂಬದಂತೆ,
ಬೀಜದೊಳಗಣ ವೃಕ್ಷದಂತೆ,
ಶಬ್ದದೊಳಗಣ ನಿಶ್ಶಬ್ದದಂತೆ
ಗುಹೇಶ್ವರಾ ನಿಮ್ಮ ಶರಣ ಸಂಬಂಧ.

ಅಲ್ಲಮಪ್ರಭು